# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 792 |
| ಮಾನ್ಯ ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21.02.2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. | ಪ್ರಶ್ನೆ ವಿವರ | ಕರಡು ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಂದಾಯ ಇಲಾಖೆಯಿಂದ ಡಿಜಿಟಲ್ ವ್ಯವಸ್ಥೆಯಡಿ ಉಲ್ಲೇಖಿತವಾಗುತ್ತಿರುವ ಭೂ ಪ್ರದೇಶಕ್ಕೂ, ವಾಸ್ತವವಾಗಿರುವ ವಿಸ್ತೀರ್ಣಕ್ಕೂ ಹೊಂದಾಣಿಕೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿ ರುವ ಕ್ರಮಗಳೇನು; | ಬಂದಿದೆ.<br><br>ಡ್ರೋಣ್ ಮುಖಾಂತರ ಹಾಲಿ ಇರುವ ಜಮೀನಿನಂತೆ Photo Image ನ್ನು Processing ಮಾಡಿ Ortho Rectified Image (ORI) ಅನ್ನು ಪಡೆಯಲಾಗುತ್ತಿದೆ (ಹಾಲಿ ಜಮೀನಿನ ಸ್ಥಿತಿ ತೋರಿಸುತ್ತದೆ). ಸದರಿ ORI ಮಾಹಿತಿಯನ್ನು Ground Truthing (GT) ಎಂಬ ತಾಂತ್ರಿಕ ಪ್ರಕ್ರಿಯೆಯ ಮೂಲಕ ಪರಿಶೀಲಿಸಿ, ಸ್ಥಳಕ್ಕೆ ತಾಳೆ ಇಟ್ಟು, ಯಾವುದೇ ವ್ಯತ್ಯಾಸವಿದ್ದಲ್ಲಿ ಅದನ್ನು ಅಗತ್ಯ ನಡವಳಿಗಳ ಮುಖಾಂತರ ಭೌತಿಕ ಸ್ಥಿತಿಯಂತೆ ಖಾತ್ರಿ ಪಡಿಸಿಕೊಳ್ಳಲಾಗುತ್ತಿದ್ದು, ಹಿಡುವಳಿದಾರರ ಹಕ್ಕು ದಾಖಲೆಗಳಿಗ ನುಗುಣವಾಗಿ ಖಾಯಂಗೊಳಿಸಲು ಭೂದಾಖಲೆಗಳ ಸಹಾಯಕ ನಿರ್ದೇಶಕರ ಮಟ್ಟದಲ್ಲಿ ಸೂಕ್ತ ವಿಚಾರಣೆಯನ್ನು ಕೈಗೊಂಡು ಭೂದಾಖಲೆಗಳನ್ನು ಅಂತಿಮಗೊಳಿಸಲಾಗುತ್ತಿದೆ. |
| ಆ) | ಭೂಕಂದಾಯ ಕಾಯ್ದೆಯನ್ವಯ ಕಂದಾಯ ಇಲಾಖೆಯು ಎಲ್ಲಾ ಆಸ್ತಿಗಳ ಮರು ಸರ್ವೆಯನ್ನು ಎಷ್ಟು ವರ್ಷಕ್ಕೊಮ್ಮೆ ನಡೆಸುತ್ತದೆ; ಇಲ್ಲಿಯವರೆಗೆ ಎಷ್ಟು ಬಾರಿ ಮರು ಸರ್ವೆಯನ್ನು ಮಾಡಲಾಗಿರುತ್ತದೆ; ಮರು ಸರ್ವೆಯನ್ನು ಮಾಡದಿದ್ದಲ್ಲಿ ಕಾರಣಗಳನ್ನು ನೀಡುವುದು; | ಕರ್ನಾಟಕ ಭೂಕಂದಾಯ ಅಧಿನಿಯಮ 1964 ಕಲಂ 115 ರನ್ವಯ 30 ವರ್ಷಗಳಿಗೊಮ್ಮೆ ಮರುಭೂಮಾಪನ ಕೈಗೊಳ್ಳಬೇಕಾಗಿರುತ್ತದೆ.<br><br>ರಾಜ್ಯದಲ್ಲಿ ಮರು ಸರ್ವೆ ಕಾರ್ಯ ಕೈಗೊಂಡಿರುವ ವಿವರಗಳು:<br><br>1. ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಆತಗೂರು ಹೋಬಳಿಯ ಎಲ್ಲಾ 35 ಗ್ರಾಮಗಳ ಮರು ಭೂಮಾಪನ ಪೂರ್ಯೆಸಲಾಗಿದೆ.<br>2. ಬೆಳಗಾವಿ ಜಿಲ್ಲೆಯ 30 ಗ್ರಾಮಗಳ ಮರು ಭೂಮಾಪನ ಕಾರ್ಯವನ್ನು ಪೂರೈಸ ಲಾಗಿದೆ.<br>3. ರಾಜ್ಯದ ಆಯ್ದ 14 ಜಿಲ್ಲೆಗಳ 25 ಗ್ರಾಮಗಳಲ್ಲಿ ಮರು ಭೂಮಾಪನ ಕಾರ್ಯ ಪೂರೈಸಲಾಗಿದೆ.<br>4. ಸರ್ಕಾರದ ದಿನಾಂಕ 07-11-2018 ಮತ್ತು 28-12-2018 ಆದೇಶಗಳನ್ವಯ ತುಮಕೂರು, ರಾಮನಗರ, ಹಾಸನ, ಬೆಳಗಾವಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಸರ್ವೆ ಆಫ್ ಇಂಡಿಯಾದ ಸಹಯೋಗದೊಂದಿಗೆ ಮತ್ತು ರಾಜ್ಯದ ಇನ್ನುಳಿದ 26 ಜಿಲ್ಲೆಗಳ ಪೈಕಿ 16 ಜಿಲ್ಲೆಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಡ್ರೋನ್ ಸೇವೆ ಪಡೆದು ಮರು |

| | | |
|---|---|---|
| | | ಭೂಮಾಪನ ಕೆಲಸಕ್ಕೆ ಪೂರಕವಾದ ಮಾಹಿತಿಯನ್ನು ಶೇಖರಿಸಲಾಗುತ್ತಿದೆ. ರಾಜ್ಯದಲ್ಲಿ ಈಗಾಗಲೆ ಒಟ್ಟು **64,291** ಚ.ಕಿಮೀ. Drone Flying ಕಾರ್ಯ ಪೂರ್ಣಗೊಂಡಿರುತ್ತದೆ.<br>5. ಪ್ರಸ್ತುತ ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿಯ ಎಲ್ಲಾ 35 ಗ್ರಾಮಗಳಲ್ಲಿ ಮರು ಭೂಮಾಪನ ಕೆಲಸ ನಿರ್ವಹಿಸುವ ಉದ್ದೇಶದಿಂದಲೇ ಡ್ರೋಣ್ ಉಪಕರಣವನ್ನು ಬಳಸಿ ತಂತ್ರಾಂಶವನ್ನು ಅಳವಡಿಸಿಕೊಂಡು ಕೆಲಸ ನಿರ್ವಹಿಸುಲಾಗುತ್ತಿದೆ. ಕಾರ್ಯವು ಪ್ರಗತಿಯಲ್ಲಿರುತ್ತದೆ.<br>6. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕು ಹಿರೇ ವಡ್ಡರಕಲ್ಲು ಗ್ರಾಮದಲ್ಲಿ ಇತ್ತೀಚಿಗೆ ಮರು ಭೂಮಾಪನ ಅಳತೆ ಕೆಲಸ ಪೂರೈಸಲಾಗಿದೆ. |
| ಇ) | ಆರ್.ಟಿ.ಸಿ. ನಕ್ಷೆಯ ಆಸ್ತಿ ವಿಸ್ತೀರ್ಣದಲ್ಲಿ ಏರುಪೇರಾಗಿರುವ ಕಾರಣ ರೈತರಿಗೆ ಜಮೀನಿನ ಖಾತೆ ಬದಲಾವಣೆ, ಹದ್ದುಬಸ್ತು, ಪೋಡಿ ಇತ್ಯಾದಿ ಪಡೆದುಕೊಳ್ಳಲು ಪರಿತಪಿಸುವಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು; | ಬಂದಿದೆ.<br><br>ರಾಜ್ಯದಲ್ಲಿ ಪಹಣಿ ಮತ್ತು ಆಕಾರಬಂದ (ನಕ್ಷೆ) ವಿಸ್ತೀರ್ಣದಲ್ಲಿ ವ್ಯತ್ಯಾಸವಿರುದನ್ನು ಸರಿಪಡಿಸುವ ಕುರಿತು ಕಂದಾಯ ಇಲಾಖೆಯಿಂದ ಪಹಣಿ ಒಟ್ಟಿಗೂಡಿಸುವ ಮತ್ತು ತಿದ್ದುಪಡಿ ಮಾಡುವ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ. ಸರ್ಕಾರದ ಮಟ್ಟದಲ್ಲಿಯೂ ಸಹ ತೀವ್ರ ಗಮನ ಹರಿಸಿ ಆಗಿಂದಾಗ್ಗೆ ನಿರ್ದಿಷ್ಟ ಸೂಚನೆಗಳನ್ನು ನೀಡಲಾಗುತ್ತಿರುತ್ತದೆ. |
| ಈ) | ರಾಜ್ಯದಲ್ಲಿ ಪ್ರಸ್ತುತ ಒಟ್ಟು ಭೂಪ್ರದೇಶ ಎಷ್ಟಿದೆ; ಭೂಮಿ ನಕ್ಷೆಯಲ್ಲಿ ಎಷ್ಟಿದೆ; ಭೂದಾಖಲೆ, ಆರ್.ಟಿ.ಸಿ.ಯಲ್ಲಿನ ಭೂಮಿ ವಿಸ್ತೀರ್ಣ ಎಷ್ಟಿದೆ; ನಕ್ಷೆಯಲ್ಲಿ ಆಸ್ತಿಗಳ ಏರುಪೇರು ಗೊಂದಲದಿಂದಾಗಿ ತಹಶೀಲ್ದಾರ್, ಎ.ಸಿ., ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಭೂ ಸಂಬಂಧಿಸಿದ ವಿವಾದಗಳ ಬಾಕಿ ಪ್ರಕರಣಗಳು ಎಷ್ಟು; ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ರಾಜ್ಯದ ಒಟ್ಟು 1,91,791 ಚ.ಕಿಮಿ ಭೂಪ್ರದೇಶ ಇರುತ್ತದೆ. ರಾಜ್ಯದ ಒಟ್ಟು ವಿಸ್ತೀರ್ಣ ಪಹಣಿಯಂತೆ 4,70,69,666 ಎಕರೆ ಮತ್ತು ಭೂದಾಖಲೆಗಳ ಇಲಾಖೆಯ ಆಕಾರ್ ಬಂದ್ ನಂತೆ 4,73,92,400 ಎಕರೆ 05 ಗುಂಟೆ ಇರುತ್ತದೆ.<br><br>ನಕ್ಷೆಯಲ್ಲಿ ಆಸ್ತಿಗಳ ಏರುಪೇರು ಗೊಂದಲದಿಂದಾಗಿ ತಹಶೀಲ್ದಾರ್, ಎ.ಸಿ., ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಭೂ ಸಂಬಂಧಿಸಿದ ವಿವಾದಗಳ ಬಾಕಿ ಪ್ರಕರಣಗಳ ವಿವರವನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ.<br><br>ಭೂ ಸಂಬಂಧಿಸಿದ ವಿವಾದಗಳ ಬಾಕಿ ಇರುವ ಪ್ರಕರಣಗಳನ್ನು R.C.C.M.S.ನಲ್ಲಿ ದಾಖಲಿಸಿಕೊಂಡು ಶೀಘ್ರ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಕಂಇ 37 ಎಸ್ಎಸ್ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು